# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2018-19ನೇ ಸಾಲಿಗೆ ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಗದಗ ಹಾಗೂ ಬೆಂಗಳೂರಿನ ಕಛೇರಿಗಳಿಗೆ ಅಧಿಕಾರಿಗಳ ವೇತನ ಹಾಗೂ ಇತರೆ ಭತ್ಯೆಗಳಿಗಾಗಿ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ, ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 163 ಜಿಪಸ 2018, ದಿನಾಂಕ: 26-04-2018.

ಪ್ರಸ್ತಾವನೆ:

2018-19ನೇ ಸಾಲಿನ ಆಯವ್ಯಯದಲ್ಲಿ ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ವಿಶ್ವವಿದ್ಯಾಲಯ. ಗದಗ ಇಲ್ಲಿಗೆ ಲೆಕ್ಕ ಶೀರ್ಷಿಕೆ:2515-00-102-0-13(101-ಸಹಾಯಧನ-ವೇತನಗಳು)ರಡಿಯಲ್ಲಿ ರೂ.70.00ಲಕ್ಷಗಳನ್ನು, ಲೆಕ್ಕ ಶೀರ್ಷಿಕೆ:2515-00-102-0-13(103-ಸಹಾಯಧನ-ಸಾಮಾನ್ಯ)ರಡಿ ರೂ.1587.00 ಲಕ್ಷಗಳು ಹಾಗೂ ಲೆಕ್ಕ ಶೀರ್ಷಿಕೆ:2515-00-102-0-13(115-ಸಹಾಯಧನ-ಗುತ್ತಿಗೆ/ಹೊರಗುತ್ತಿಗೆ) ರಡಿಯಲ್ಲಿ ರೂ.193.00ಲಕ್ಷಗಳನ್ನು ವೇತನ ಹಾಗೂ ವೇತನವಲ್ಲದ ಇತರೆ ಖರ್ಚುಗಳಿಗಾಗಿ ಒಟ್ಟು ರೂ.1850.00ಲಕ್ಷಗಳನ್ನು ಒದಗಿಸಲಾಗಿದೆ. ಮೇಲೆ ಓದಲಾದ ಆದೇಶದಲ್ಲಿ ಸದರಿ ಲೆಕ್ಕ ಶೀಷಿಕೆಗಳಲ್ಲಿ ಲಭ್ಯ ವಿರುವ ಅನುದಾನದಲ್ಲಿ ಮೊದಲೆಯ ಕಂತನ್ನು ಬಿಡುಗಡೆ ಮಾಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | ಆಯವ್ಯಯದಲ್ಲಿ ಒದಗಿಸಿರುವ ಅನುದಾನ | ಒಂದನೇ ಕಂತಾಗಿ ಬಿಡುಗಡೆ ಮಾಡಿದ ಅನುದಾನ | ಲಭ್ಯವಿರುವ ಅನುದಾನ | 2ನೇ ಕಂತಾಗಿ ಬಿಡುಗಡೆಗೊಳಿಸುವ ಅನುದಾನ |
|---|---|---|---|---|---|
| 1. | 2515-00-102-0-13(101) | 70.00 | 17.00 | 53.00 | 18.00 |
| 2. | 2515-00-102-0-13(103) | 1587.00 | 396.75 | 1190.25 | 396.75 |
| 3. | 2515-00-102-0-13(115) | 193.00 | 48.00 | 145.00 | 48.50 |

ಪ್ರಸ್ತುತ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಬೆಂಗಳೂರಿನ ಪ್ರಾದೇಶಿಕ ಕಛೇರಿ ಇಲ್ಲಿಯ ಅಧಿಕಾರಿ/ನೌಕರರ ವೇತನ ಹಾಗೂ ಇತರೆ ವೆಚ್ಚಗಳಿಗಾಗಿ ಮೇಲೆನ ಕೋಷ್ಟಕದಲ್ಲಿ ವಿವರಿಸಿರುವಂತೆ ಲೆಕ್ಕ ಶೀಷಕೆಗಳಲ್ಲಿ 2ನೇ ಕಂತನ್ನು ಬಿಡುಗಡೆಗೊಳಿಸಲು ಉದ್ದೇಶಿಸಿದೆ. ಆದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 163 ಜಿಪಸ 2018, ಬೆಂಗಳೂರು, ದಿನಾಂಕ:24-08-2018**

ಮೇಲಿನ ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು, "ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ" ಗದಗ ಹಾಗೂ ಬೆಂಗಳೂರು ಇಲ್ಲಿನ ಅಧಿಕಾರಿಗಳ ಹಾಗೂ ನೌಕರರ ವೇತನ ಹಾಗೂ ಇತರೆ ವೆಚ್ಚಗಳಿಗಾಗಿ 2018-19ನೇ ಸಾಲಿನಲ್ಲಿ ಪ್ರಸ್ತುತ ಲಭ್ಯವಿರುವ ಲೆಕ್ಕ ಶೀರ್ಷಿಕೆ:2515-00-102-0-13(101-ಸಹಾಯಧನ-ವೇತನಗಳು)ರಡಿಯಲ್ಲಿ ರೂ.70.00 ಲಕ್ಷಗಳಲ್ಲಿ ರೂ.18.00 ಲಕ್ಷಗಳನ್ನು, ಲೆಕ್ಕ ಶೀರ್ಷಿಕೆ:2515-00-102-0-13(103-ಸಹಾಯಧನ-ಸಾಮಾನ್ಯ) ರಡಿ ರೂ.1587.00ಲಕ್ಷಗಳಲ್ಲಿ ರೂ.396.75ಲಕ್ಷಗಳನ್ನು ಹಾಗೂ ಲೆಕ್ಕ ಶೀರ್ಷಿಕೆ:2515-00-102-0-13(115-ಸಹಾಯಧನ-ಗುತ್ತಿಗೆ/ಹೊರಗುತ್ತಿಗೆ) ರಡಿಯಲ್ಲಿ ರೂ.193.00ಲಕ್ಷಗಳಲ್ಲಿ ರೂ.48.50ಲಕ್ಷಗಳನ್ನು ವೇತನ ಹಾಗೂ ವೇತನವಲ್ಲದ ಇತರೆ ವೆಚ್ಚಗಳಿಗಾಗಿ 2ನೇ ಕಂತನ್ನು ಬಿಡುಗಡೆಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇದರ ಬ್ಯಾಂಕ್ ಉಳಿತಾಯ ಸಂಖ್ಯೆ:36538494457 (ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗೌರ್ನಮೆಂಟ್ ಎಸ್ಟೇಟ್

ಬ್ರಾಂಚ್, ಗದಗ, IFSC Code: SBIN0011270, Branch Code:11270) (Recipient Code:1200736300) ಗೆ ಖಜಾನೆ-2 ಮೂಲಕ ಜಮೆ ಮಾಡಲು ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಜಿಲ್ಲಾ ಪಂಚಾಯತ್ ಶಾಖೆ ಇವರಿಗೆ ಅನುದಾನದ ಬಿಲ್ಲಿನ ಮೇಲೆ ರುಜು ಮಾಡಿ ಸೆಳೆಯಲು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 04 ಟಿಎಫ್‌ಪಿ 2018, ದಿನಾಂಕ: 24-07-2018 ರಲ್ಲಿ ಆಯಾಯಾ ಇಲಾಖಾ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿರವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ವಿ.ವೆಂಕಟೇಶ್
**(ವಿ.ವೆಂಕಟೇಶ್)**
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

24.12.18

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು.
3. ಕುಲಪತಿಗಳು, ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ.
4. ಕುಲಸಚಿವರು, ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ.
5. ನಿರ್ದೇಶಕರು ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
6. ಯೋಜನಾ ನಿರ್ದೇಶಕರು(ಖಜಾನೆ-2), ವಾಣಿಜ್ಯ ತೆರಿಗೆ ಇಲಾಖೆ ಕಟ್ಟಡ, 7ನೇ ಮಹಡಿ, ಗಾಂಧಿನಗರ, ಬೆಂಗಳೂರು-1.
7. ಉಪನಿರ್ದೇಶಕರು, ಜಿಲ್ಲಾ ಖಜಾನೆ, ಗದಗ.
8. ಹಣಕಾಸು ಅಧಿಕಾರಿ, ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ.
9. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
10. ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲು/ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.